ತೌರಿನ ರಹಸ್ಯಗಳು. ಮನೆಗೆ ಬಂದ ಸೊಸೆಯ ಮುಂದೆ ಬಿಚ್ಚಿಡಲಾಗುತ್ತದೆಯೇ?

'ಅತ್ತೇ.'

'ಹಾಂ... ಏನಮ್ಮ?' ಬೆಚ್ಚಿ ಅವಳತ್ತ ತಿರುಗಿದೆ.

'ಇದು ಇತ್ಯರ್ಥವಾಗಿ ಬಿಡಲಿ... ನಾಳೆ ಬೆಳಗ್ಗೆ ಆ ವೃದ್ಧಾಶ್ರಮಕ್ಕೆ ಹೋಗೋಣ... ವಿವೇಕ್ ಕ್ಯಾಬ್‌ಗೆ ಹೇಳಿ...'

'ರತ್ನತ್ತೆ ವೃದ್ಧಾಶ್ರಮದಲ್ಲಿ ಏಕೆ ಇರ್‍ತಾರೆ? ಸುನೀತಾ, ರಾಘು ಇಬ್ಬರೂ ಕೋಟ್ಯಧೀಶ್ವರರು! ಅಮ್ಮನ ನೋಡಿಕೊಳ್ಳುವುದಿಲ್ಲವೇ? ನಮಗೆಲ್ಲಾ ಹೋಟೆಲಿನಲ್ಲಿ ಊಟ ಹಾಕಿಸಿ, ರತ್ನತ್ತೆ ಕೈಲಿ ಬೆಳ್ಳಿ ಆರತಿ ಸೊಡಿಲು ಕೊಡಿಸಿ, ಕರೆದುಕೊಂಡು ಹೋದಳು. ನಾನು ಅತ್ತೆಗೆ ಮೈಸೂರು ಸಿಲ್ಕ್ ಸೀರೆ ಉಡುಗೊರೆ ಕೊಟ್ಟಿದ್ದೆ...'

'ಹಾಗಲ್ಲಾ ಅತ್ತೇ...'

'ಅಲ್ಲಾ... ಅಲ್ಲಿಂದ ವಾಪಸ್ ಕರೆದುಕೊಂಡು ಬಂದು ಇಲ್ಲಿ ವೃದ್ಧಾಶ್ರಮಕ್ಕೆ ಸೇರಿಸಿ ನಮಗೆ... ಹೇಳದೆ ಹೋಗಿರುತ್ತಾರೆಯೇ?'

'ಹೇಳದೆ ಹೋಗಿದ್ದಾರಲ್ಲಾ... ನಾಳೆ ಹೋಗಿ ಬರೋಣ... ಅವರು ನಿಮ್ಮ ರತ್ನತ್ತೆಯೋ ಅಲ್ಲವೋ ಗೊತ್ತಾಗುತ್ತೆ...'

'ಹೂಂ' ಸುಮ್ಮನೆ ಕುಳಿತೆ.

'ಸುರೇಶ ಮಾವಂಗೆ ಹೇಳ್ತೀನಿ... ಅವರೂ ಬರಬಹುದೇನೋ...'

'ಬೇಡ... ಅವನಿಗೆ ಮೊದಲೇ ಅವರನ್ನು ಕಂಡರೆ ಆಗಲ್ಲ... ಏನಾದರೂ ಅಂದುಗಿಂದಾನು...' ಅಂದೆ.

'ಬೆಳಗ್ಗೆ ಹತ್ತು ಗಂಟೆಗೆ ಹೋಗೋಣ... ಓಕೇನಾ? ಸೌಮ್ಯಾ' ನನಗೆ ಹೇಳಿ, ಹೆಂಡತಿಯನ್ನು ಕೇಳಿದ ಮಗನತ್ತ ನೋಡಿ ನಕ್ಕೆ.

'ಯಾಕೆ ನಗ್ತಾ ಇದ್ಯಾ?'

'ಯಾಕೂ ಇಲ್ಲ... ಸುಮ್ಮನೆ ಹಾಗೇ...'

'ಥ್ಯಾಂಕ್ ಗಾಡ್! ಅಮ್ಮ, ನೀನು ರತ್ನತ್ತೆಯ ರಕ್ತ ಸಂಬಂಧಿ ಅಲ್ಲ! ಸೌಮ್ಯಾ, ನಿಂಗೆ ಗೊತ್ತಾ? ರತ್ನತ್ತೆ ನನಗೆ ವಾವೆಯಲ್ಲಿ ಅಜ್ಜಿ ಆಗಬೇಕು. ಆದರೆ ನಾನೂ ಅತ್ತೆ ಅಂತಲೇ ಕರಿಯಬೇಕು ಅನ್ನೋ ಕಂಡೀಷನ್ನು... ನನ್ನ ಮುಖ ನೋಡಿ ಅವರು ಮಾತಾಡಿಸಿದ್ದೇ ನಂಗೆ ಗೂಗಲ್‌ನಲ್ಲಿ ಕೆಲಸ ಸಿಕ್ಕಿ ಸಿಂಗಪುರಕ್ಕೆ ಹೊರಟು ನಿಂತಾಗ, ನನಗೆ ವರ್ಷಕ್ಕೆ ಬರುವ ಸಂಬಳದ ಮೊತ್ತ ತಿಳಿದಾಗ...' ಮಗ ದೊಡ್ಡದಾಗಿ ನಗುತ್ತಾ ಹೇಳುತ್ತಿದ್ದ.

ಅಚ್ಚರಿಯಿಂದ ಅವನತ್ತ ನೋಡಿದೆ. ಗಂಡು ಹುಡುಗ, ಈ ಸೂಕ್ಷ್ಮಗಳೆಲ್ಲಾ ಅರ್ಥವಾಗೊಲ್ಲ ಎಂದುಕೊಂಡಿದ್ದೆ. ಎಲ್ಲಾ ಅರ್ಥವಾಗಿದೆ... ಅರ್ಥವಾಗುತ್ತೆ.

'ನಮ್ಮ ಅಜ್ಜಿಗೆ, ಅಮ್ಮಂಗೆ ಅವರನ್ನು ಕಂಡರೆ ವಿಪರೀತ ಪ್ರೀತಿ, ಗೌರವ. ಇವರು ಗೌರವ ತೋರಿಸಿದಷ್ಟೂ ಅವರಿಗೆ ಅಹಂಕಾರ ಹೆಚ್ಚಾಗ್ತಾ ಇತ್ತು. ನಮ್ಮಜ್ಜಿಗೆ ಹಾಗೂ ಈ ಅಮ್ಮಂಗೆ ಅರ್ಥವೇ ಆಗ್ತಿರಲಿಲ್ಲ... ಈಗಲೂ ಆಗಿಲ್ಲ! ಅಮ್ಮ ಹೇಳಿದ್ರಲ್ಲಾ... ಅವರ ಮಕ್ಕಳು ಕೋಟ್ಯಧೀಶ್ವರರು ಅಂತ. ಅಲ್ಲಿಂದ ಬಂದ್ರೆ ನಮ್ಮ ಮನೆಗೇನು ಬರ್ತಾ ಇರಲಿಲ್ಲ...

ಈ ಅಮ್ಮ ನನ್ನ ಎಳೆದುಕೊಂಡು ಅವರ ಮನೆಗೆ ಹೋಗ್ತಾ ಇದ್ಲು. ಅವರು ಅಮ್ಮಂಗೆ ಒಂದು, ಒಂದೇ ಒಂದು ಘಮಘಮಿಸುವ ಸೋಪು... ನಂಗೆ ಒಂದು ಬಾರ್ ಚಾಕೊಲೇಟ್ ಕೊಡೋರು...